ಶ್ರೀ ಶರಣಪ್ಪ.—ಕಾಟನ್ ಕಾರ್ಪೋರೇಷನ್ ಮಾನ್ಯತೆ ಪಡೆದಿರುವ ಮಾರ್ಕೆಟಿಂಗ್ ಸೊಸೈಟಿಗಳು ಏನು ಅರಳೆಯನ್ನು ಖರೀದಿ ಮಾಡುತ್ತಿದ್ದಾರೋ ಅವರಿಗೆ ಫೈನಾನ್ಸ್ ಯಾರು ಕೊಡುತ್ತಾರೆ ?

ಶ್ರೀ ಎ. ಶಂಕರ ಆಳ್ವ.—ಕಾಟನ್ ಕಾರ್ಪೋರೇಷನ್ ಮಾನ್ಯತೆ ಪಡೆದಿರುವ 8 ಸೊಸೈಟಿಗಳು ಅವರೇನೇ ಪ್ರತಿವರ್ಷವೂ ಬಂದು ದುಡ್ಡು ಹಾಕಿ ಅರಳೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಆರೀತಿ ಅವರು ಒಪ್ಪಂದ ಮಾಡಿಕೊಂಡಿದ್ದಾರೆ.

Diploma holder (Local Candidates) working in Upper Krishna Project

278. Sri BAPU GOWDA RAYAPPA (Shahapur).—

Will the Minister for Public Works and Electricity be pleased to state :—

(*a*) the number of diploma holders working on daily wage basis and as local candidates in Upper Krishna Prjoect ;

(*b*) since when they are working there ;

(*c*) when their services will be regularised and made permanent ?

Sri H. M. CHANNABASAPPA (Minister for Public Works).—

(*a*) (i) Daily wage basis ... 14

(ii) Local candidates ... 13

(*b*) (i) Diploma holders on daily wages are working for the period ranging from 1 to 2 years.

(ii) Diploma holders as local candidates are working for 10 to 12 years.

(*c*) (i) Diploma holders on daily wages are not eligible for regularisation of their services under the existing orders.

(ii) The services of Diploma holders working as local candidates are being regularised by the Chief Engineer (C & B).

ಶ್ರೀ ಬಾಪೂಗೌಡ ರಾಯಪ್ಪ.—ಡೈಲಿ ವೇಜಸ್ ಮೇಲೆ ಕೆಲಸ ಮಾಡುವ ಡಿಪ್ಲೊಮಾದಾರರು ಸಾವಿರಾರು ಜನರಿದ್ದಾರೆ. ಅಂಥವರ ಸರ್ವಿಸ್ ಯಾವಾಗ ರೆಗ್ಯುಲರೈಸ್ ಮಾಡುತ್ತೀರಿ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಡೈಲಿ ವೇಜಸ್ ಮೇಲೆ ಕೆಲಸ ಮಾಡುತ್ತಿರುವವರು ಮಾನ್ಯ ಸದಸ್ಯರು ಹೇಳುವಂತೆ ಸಾವಿರಾರು ಜನರಿಲ್ಲ. 14 ಜನ ಮಾತ್ರ ಇರತಕ್ಕದ್ದು.

ಶ್ರೀ ಬಾಪೂಗೌಡ ರಾಯಪ್ಪ.—ಸ್ಥಳೀಯ ಅಭ್ಯರ್ಥಿಗಳಾಗಿ 10–12 ವರ್ಷದಿಂದ ಡಿಪ್ಲೊಮಾದಾರರು ಕೆಲಸ ಮಾಡುತ್ತಿದ್ದಾರೆ. ಅವರ ಸರ್ವಿಸ್ ಮತ್ತು ಪೇಸ್ಕೇಲ್ ರೆಗ್ಯುಲರೈಸ್ ಮಾಡಿಲ್ಲ, ಮುಂದೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಹಾಗೆ ರೆಗ್ಯುಲರೈಸ್ ಮಾಡುವ ಕಾಲಕ್ಕೆ ಅವರ ಪೇಸ್ಕೇಲ್, ಸರ್ವಿಸ್ ಮುಂತಾದುವನ್ನೆಲ್ಲ ಗಣನೆಗೆ ತೆಗೆದುಕೊಳ್ಳಲಾಗುತ್ತದೆಯೇ ?

† Indicates that the remarks or speeches have not been revised by the member concerned.

ಶ್ರೀ ಎಚ್. ಎಂ. ಚನ್ನಬಸಪ್ಪ.—13 ಜನರ ಪೈಕಿ 11 ಜನರ ಸರ್ವಿಸ್ ರೆಗ್ಯುಲರೈಸ್‌ಆಗಿದೆ ಒಬ್ಬರಿಗೆ ವಯಸ್ಸಾಗಿರುವುದರಿಂದ ರೆಗ್ಯುಲರೈಸ್ ಮಾಡುವುದಕ್ಕೆ ಸಾಧ್ಯವಿಲ್ಲ. ಇನ್ನೊಬ್ಬರ ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಬಾಪೂ ಗೌಡ ರಾಯಪ್ಪ.—ಡೈಲಿ ವೇಜಸ್ ಮೇಲೆ ಕೆಲಸ ಮಾಡತಕ್ಕ 14 ಮಂದಿಗೆ ಎಷ್ಟು ದಿವಸಗಳಲ್ಲಿ ರೆಗ್ಯುಲರೈಸ್ ಮಾಡುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರ ಸರ್ವಿಸ್ ರೆಗ್ಯುಲರೈಸ್ ಮಾಡುವುದಕ್ಕೆ ಸಾಧ್ಯವಿಲ್ಲ.

Sri B. B. SAYANAK.—May I know how many rupees you are paying as daily wages ?

Sri H. M. CHANNABASAPPA.—That depends upon the locality and nature of work, and I cannot tell you what wages are being paid.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಸರ್ಕಾರದವರು ಸುಮಾರು ಏಳು ಸಾವಿರ ಜನ ಸ್ಥಳೀಯ ಅಭ್ಯರ್ಥಿಗಳನ್ನು ರೆಗ್ಯುಲರೈಸ್ ಮಾಡಿರುವಾಗ 12 ವರ್ಷ ಕಾಲ ಕೆಲಸ ಮಾಡಿರುವ 13ಜನ ಡಿಪ್ಲೊಮಾದಾರರನ್ನು ಹೇಗೆ ರೆಗ್ಯುಲರೈಸ್ ಮಾಡಲಿಲ್ಲ ಎಂದು ಹೇಳುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—13 ಜನರೇನಿದ್ದಾರೆ, ಅವರ ಪೈಕಿ 11 ಜನರನ್ನು ರೆಗ್ಯುಲರೈಸ್ ಮಾಡಿದ್ದೇವೆ. ಅವರ ಸರ್ವಿಸ್ ಯಾವತ್ತಿನಿಂದ ಪ್ರಾರಂಭ ಮಾಡಿದರು ಆವತ್ತಿನಿಂದ ಲೆಕ್ಕಕ್ಕೆ ತೆಗೆದುಕೊಳ್ಳುತ್ತೇವೆ. ಇನ್ನಿಬ್ಬರ ಪೈಕಿ ನಾನು ಆಗಲೇ ಹೇಳಿದಂತೆ ಒಬ್ಬರದು ಏಜ್ ಬಾರ್ ಆಗಿರುವುದರಿಂದ ಅವರನ್ನು ರೆಗ್ಯುಲರೈಸ್ ಮಾಡುವುದಕ್ಕಾಗುವುದಿಲ್ಲ. ಇನ್ನೊಬ್ಬರ ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಬಾಪೂ ಗೌಡ ರಾಯಪ್ಪ.—10—12 ವರ್ಷಕಾಲ ಲೋಕಲ್ ಕ್ಯಾಂಡಿಡೇಟಾಗಿ ಕೆಲಸ ಮಾಡಿದ್ದರೂ ವಯಸ್ಸಾಗಿದೆ ಎನ್ನುವ ಕಾರಣದಿಂದ ರೆಗ್ಯುಲರೈಸ್ ಮಾಡುವುದಕ್ಕೆ ಆಗುವುದಿಲ್ಲವೆಂದರೆ ಮುಂದೆ ಪರಿಸ್ಥಿತಿ ಏನಾಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಸರ್ವಿಸ್ ಪ್ರಾರಂಭ ಮಾಡಿದಾಗ ಯಾವವಯಸ್ಸಿನ ಬೇಕಾಗಿತ್ತೋ ಆ ವಯಸ್ಸು ಇದ್ದರೆ ಮಾತ್ರ ರೆಗ್ಯುಲರೈಸ್ ಮಾಡುವುದಕ್ಕೆ ಅವಕಾಶವಾಗುತ್ತದೆ, ಇಲ್ಲದೆ ಇದ್ದರೆ ಇಲ್ಲ.

Industrial Loans Granted in Arsikere Taluk

311. Sri H. S. SIDDAPPA (Arsikere).—

Will the Minister for Industries be pleased to state :—

(*a*) the number of industrial loans granted in Arsikere Taluk, name, address and the amount granted together with the name of the industry may be furnished (both by Government and the Industrial Bank since 1967) ;

(*b*) the number of defaulters and the amounts defaulted ?

Sri S. M. KRISHNA (Minister for Industries).—

(*a*) *Vide* Statements appended.

(*b*) 17. Rs. 79,430-44.